# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ.ಬಿ12(1)ಪಿಆರ್/108/2024-25

ಮುಖ್ಯ ಆಯುಕ್ತರವರ ಕಛೇರಿ
ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 31.7.24

**ಕಛೇರಿ ಆದೇಶ**

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ 'ಸಿ' ವೃಂದದ ಮೌಲ್ಯಮಾಪಕರ ಸಾಮಾನ್ಯ ವರ್ಗಾವಣೆ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ನಅಇ 63 ಎಂಎನ್‌ಯು 2023, ದಿನಾಂಕ: 04-07-2024
2) ಸಂಖ್ಯೆ: ಬಿ12(5)ಪಿಆರ್/112/24-25, ದಿನಾಂಕ: 20-07-2024ರ ಆಂತರಿಕ ಕಛೇರಿ ಟಿಪ್ಪಣಿ
3) ಸಂಖ್ಯೆ: ಬಿ12(5)ಪಿಆರ್/112/24-25, ದಿನಾಂಕ:20-07-2024ರ ಸುತ್ತೋಲೆ
4) ಮಾನ್ಯ ಮುಖ್ಯ ಆಯುಕ್ತರು ರವರ ಸಂಖ್ಯೆ:ಬಿ12(5)ಪಿಆರ್/112/24-25ರಲ್ಲಿ ದಿ:22-07-2024 ರಂದು ಹೊರಡಿಸಿರುವ ಮಾರ್ಗಸೂಚಿಗಳು.
5) ಸಂಖ್ಯೆ: ಬಿ12(5)ಪಿಆರ್/112/24-25, ದಿ: 26-07-2024ರ ಕಛೇರಿ ಆದೇಶ
6) ದಿನಾಂಕ: 29-07-2024ರಂದು ಸ್ಥಳ ಆಯ್ಕೆ ಸಂಬಂಧ ನಡೆದ ಕೌನ್ಸಿಲಿಂಗ್ ಪ್ರಕ್ರಿಯೆ

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-(1)ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶದನುಸಾರ 10 ವರ್ಷಗಳಿಗೂ ಮಿಗಿಲಾಗಿ ಒಂದೇ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ 'ಸಿ' ವೃಂದದ ಮೌಲ್ಯಮಾಪಕರನ್ನು ಬೇರೆ ವಲಯಕ್ಕೆ ವರ್ಗಾವಣೆ ಮಾಡುವ ಸಂಬಂಧ ಉಲ್ಲೇಖ-(6)ರಂತೆ ನಡೆದ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಕೆಳಕಂಡ ಮೌಲ್ಯಮಾಪಕರು ಆಯ್ಕೆ ಮಾಡಿರುವಂತೆ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಸ್ಥಳಗಳಲ್ಲಿ ಕಾರ್ಯನಿರ್ವಹಿಸಲು ವರ್ಗಾಯಿಸಿ ಆದೇಶಿಸಿದೆ.

| ಕ್ರ.ಸಂ | ಶ್ರೀಯುತರ ಹೆಸರು | ಹಾಲಿ ಕಾರ್ಯನಿರ್ವಹಿಸುತ್ತಿರುವ ಕಛೇರಿ | ಕೌನ್ಸಿಲಿಂಗ್ ಮುಖಾಂತರ ಆಯ್ಕೆ ಮಾಡಿಕೊಂಡಿರುವ ವರ್ಗಾಯಿಸಿ ನೇಮಿಸಿರುವ ಸ್ಥಳ |
|---|---|---|---|
| 1. | ಟಿ.ಗೋಪಾಲ್ | ಸ.ಕಂ.ಅ (ರಾ.ರಾ.ನಗರ) | ಸ.ಕಂ.ಅ (ಸಿ.ವಿ.ರಾಮನ್‌ನಗರ) ಖಾಲಿ ಇರುವ ಸ್ಥಾನಕ್ಕೆ |
| 2. | ಸಾಗರ್ ಜೆ | ಸ.ಕಂ.ಅ (ಶೆಟ್ಟಿಹಳ್ಳಿ) | ಸ.ಕಂ.ಅ (ಹೆಗ್ಗನಹಳ್ಳಿ) ಶ್ರೀ ಎನ್.ವೆಂಕಟೇಶ್ ಇವರ ಸ್ಥಾನಕ್ಕೆ |
| 3. | ಎನ್.ವೆಂಕಟೇಶ್ | ಸ.ಕಂ.ಅ (ಹೆಗ್ಗನಹಳ್ಳಿ) | ಸ.ಕಂ.ಅ (ಶೆಟ್ಟಿಹಳ್ಳಿ) ಶ್ರೀ ಸಾಗರ್ ಜೆ. ಇವರ ಸ್ಥಾನಕ್ಕೆ |

ಮುಂದುವರೆದು, ಕೌನ್ಸಿಲಿಂಗ್ ಪ್ರಕ್ರಿಯೆಗೆ ಒಬ್ಬ ಕಂದಾಯ ಮೌಲ್ಯಮಾಪಕರು ಗೈರು ಹಾಜರಾಗಿರುತ್ತಾರೆ. ಹೀಗಾಗಿ ಲಾಟರಿ ಎತ್ತುವ ಪ್ರಶ್ನೆ ಉದ್ಭವಿಸುವುದಿಲ್ಲ. ಪ್ರಕರಣದಲ್ಲಿ ಒಂದು ಹುದ್ದೆ ಮಾತ್ರ ಖಾಲಿ ಇರುತ್ತದೆ. ಆದ್ದರಿಂದ ಸದರಿ ಖಾಲಿ ಇರುವ ಸ್ಥಾನಕ್ಕೆ ಈ ಕೆಳಕಂಡ ಕಂದಾಯ ಮೌಲ್ಯಮಾಪಕರನ್ನು ಆಯ್ಕೆ ಮಾಡಿ ವರ್ಗಾಯಿಸಿ ಆದೇಶೀಸಿದೆ.

| ಕ್ರ.ಸಂ | ಶ್ರೀಯುತರ ಹೆಸರು | ಹಾಲಿ ಕಾರ್ಯನಿರ್ವಹಿಸುತ್ತಿರುವ ಕಛೇರಿ | ಮುಂದುವರೆಸಿರುವ ಸ್ಥಳ |
|---|---|---|---|
| 1. | ಪುಟ್ಟೇಗೌಡ ಈ | ಸ.ಕಂ.ಅ (ಪೀಣ್ಯಕೈಗಾರಿಕ ಪ್ರದೇಶ) | ಸ.ಕಂ.ಅ (ರಾ.ರಾ.ನಗರ) ಶ್ರೀ ಟಿ.ಗೋಪಾಲ್ ಇವರ ಸ್ಥಾನಕ್ಕೆ |

ಮೇಲ್ಕಂಡ ಆದೇಶದನ್ವಯ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು / ಇಲಾಖಾ ಮುಖ್ಯಸ್ಥರುಗಳು ವರ್ಗಾವಣೆಗೊಂಡ ನೌಕರರು ವರ್ಗಾಯಿಸಲಾಗಿರುವ ಸ್ಥಳದಲ್ಲಿ ಕಾರ್ಯನಿರ್ವಹಿಸಲು ಅನುವಾಗುವಂತೆ ಅಗತ್ಯ ಕ್ರಮಕೈಗೊಳ್ಳುವುದು.

ಮೇಲ್ಕಂಡ ಆದೇಶವು ಈ ಕೆಳಕಂಡ ಷರತ್ತಿಗೊಳಪಟ್ಟಿರುತ್ತದೆ.

ಷರತ್ತುಗಳ:–

1. ಸಾಮಾನ್ಯ ವರ್ಗಾವಣೆಗೊಂಡಿರುವ ಸಿಬ್ಬಂದಿಗಳು ಬೇರೆ ಸ್ಥಳಕ್ಕೆ ವರ್ಗಾವಣೆ ಕೋರುವಂತಿಲ್ಲ ಹಾಗೂ ಈ ಆದೇಶವನ್ನು ಪಾಲಿಸದ ಸಂಬಂಧಪಟ್ಟ ಸಿಬ್ಬಂದಿಗಳು ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲಾಗುವುದು.
2. ವರ್ಗಾವಣೆ ಪ್ರಕ್ರಿಯೆ ಬಗ್ಗೆ ಯಾವುದಾದರೂ ಆಕ್ಷೇಪಣೆಗಳು / ದೂರುಗಳು ಸ್ವೀಕೃತಿಯಾದಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳುವ ಷರತ್ತಿಗೊಳಪಡಿಸಿದೆ.
3. ಸದರಿ ವರ್ಗಾವಣೆ ಆದೇಶದಲ್ಲಿ ವರ್ಗಾವಣೆಗೊಂಡಿರುವ ಸಿಬ್ಬಂದಿಗಳು ವರ್ಗಾವಣೆಗೊಂಡ ಸ್ಥಳದಲ್ಲಿ ವರದಿ ಮಾಡಿಕೊಳ್ಳುವ ಬಗ್ಗೆ ಇಲಾಖಾ ಮುಖ್ಯಸ್ಥರು ಅಗತ್ಯ ಕ್ರಮ ಕೈಗೊಳ್ಳುವುದು.

31.7.24

ಮಾನ್ಯ ಮುಖ್ಯ ಆಯುಕ್ತರು ರವರ ಆದೇಶದಂತೆ)

ವಿಶೇಷ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

31.7.24

ಪ್ರತಿಯನ್ನು : ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
: ಮಾನ್ಯ ವಿಶೇಷ ಆಯುಕ್ತರು(ಆಡಳಿತ)/(ಕಂದಾಯ)/(ಮಾಹಿತಿ ತಂತ್ರಜ್ಞಾನ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಎಲ್ಲಾ ವಲಯ ಆಯುಕ್ತರು ರವರಿಗೆ ಮಾಹಿತಿಗೆ ಕಳುಹಿಸಿದೆ.
: ಎಲ್ಲಾ ಜಂಟಿ ಆಯುಕ್ತರು ರವರುಗಳಿಗೆ ಅಗತ್ಯ ಕ್ರಮಕ್ಕೆ ಕಳುಹಿಸಿದೆ.
: ಸಂಬಂಧಪಟ್ಟ ಕಂದಾಯ ಅಧಿಕಾರಿ / ಉಪ ಕಂದಾಯ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕೆ ಕಳುಹಿಸಿದೆ.
: ಸಂಬಂಧಪಟ್ಟ ಉಪ ನಿಯಂತ್ರಕರು (ಹಣಕಾಸು) ರವರಿಗೆ ಅಗತ್ಯ ಕ್ರಮಕ್ಕೆ ಕಳುಹಿಸಿದೆ.
: ಸಂಬಂಧಪಟ್ಟ ಅಧಿಕಾರಿಗಳಿಗೆ / ಕಛೇರಿ ಪ್ರತಿ.